ಸಹೋದರರಾದ ಪನ್ನೇಶಿ ಮತ್ತು ಪದ್ದೇಶಿಯವರನ್ನು ಕರೆಸಿ ಆ ನಾನೂರು ನಾನೂರೈವತ್ತು ವರ್ಷ ಹಳೆಯ ಆಲದ ಮರವನ್ನು ಕೊಯ್ಯಲು ಹೇಳಿದ್ದ. ಅದರ ಬೇರುಗಳು ಇಡೀ ಹೊಲದ ತುಂಬೆಲ್ಲಾ ಹರಡಿಕೊಂಡಿದ್ದವು. ಗುಂಡಿ ಅಗೆದು ಬೇರುಗಳನ್ನು ಕಡಿದು ಹಾಕುವಾಗ ಅವರಿಗೆ ಧಗ್ಗೆಂದು ಹೊಳೆದ ಈ ಬಂಗಾರದ ಜಿಂಕೆ ಸಿಕ್ಕಿತ್ತು. ಬೇರುಗಳು ಅದರ ಸುತ್ತ ಸುತ್ತಿಕೊಂಡಿರುವುದ ಬಿಡಿಸಿ ಬಿಡಿಸಿ ಹೊರ ತೆಗೆಯುವುದರೊಳಗೆ ಗಾಳಿಗಿಂತಲೂ ವೇಗದಲ್ಲಿ ಈ ಸುದ್ದಿ ಊರಿಗೆ ಹಬ್ಬಿ, ಅದು ರಾಜ್ಯ, ದೇಶ ಮತ್ತು ವಿದೇಶಗಳಲ್ಲಿಯೂ ಸುದ್ದಿಯಾಯ್ತು. ಈಗಾಗಲೇ ಸಾವುನೋವುಗಳಿಂದ ಜರ್ಜರಿತಗೊಂಡಿದ್ದ ಸಣ್ಣ ಶಿವನಂಜಯ್ಯ ಈ ಬಂಗಾರದ ಪ್ರಾಣಿಯ ದಿಸೆಯಿಂದ ಇನ್ನಷ್ಟು ಕುಗ್ಗಿಹೋದ. ಮನಸ್ಸಿನೊಳಗೆ ಶಪಿಸಿಕೊಳ್ಳುತ್ತಾ, ಬೈಯ್ದುಕೊಳ್ಳುತ್ತಾ ಹೊರಬಂದ. ಇವನು ಹೊಸ್ತಿಲು ದಾಟುವುದನ್ನೇ ಕಾಯುತ್ತಿದ್ದ ಟಿ.ವಿ.ಯವರು ಉದ್ದುದ್ದನೆಯ ಕೊಳವೆಯಂತಹ ಮೈಕ್ರೋಫೋನ್‌ಗಳನ್ನು ಅವನ ಅಭಿಪ್ರಾಯವನ್ನು ಕೇಳಲು ಅವನ ಬಾಯಿಗೆ ಹಿಡಿದರು. ನೂಕುನುಗ್ಗಲು ಆಗಿ ಒಂದು ಮೈಕ್ರೋಫೋನ್ ಅವನ ಮೂಗಿಗೆ ಜೋರಾಗಿ ತಾಗಿ ಮೂಗಲ್ಲಿ ರಕ್ತ ಕಾಣಿಸಿಕೊಂಡು ಮೂರ್ಛೆ ಹೋದ. ಅಷ್ಟೊತ್ತಿಗೆ ಪೊಲೀಸ್‌ನವರು ಬಂದರು. ಟಿ.ವಿ. ಚಾನೆಲ್‌ನವರನ್ನು ಚದುರಿಸಿ ಶಿವನಂಜಯ್ಯನ ಮುಖದ ಮೇಲೆ ಟಿ.ವಿ. ಚಾನೆಲ್‌ನವರ ಹತ್ತಿರ ಇದ್ದ ಬಿಸ್ಲೇರಿ ಬಾಟಲಿಯಿಂದ ನೀರನ್ನು ಈಸುಕೊಂಡು ಚಿಮುಕಿಸಿದರು. ಅಲ್ಲಿದ್ದವರೊಬ್ಬರು ಗಾಳಿ ಬೀಸಿದರು. ಸ್ವಲ್ಪ ಹೊತ್ತಿನ ಬಳಿಕ ನಿಧಾನ ಕಣ್ಣು ತೆರೆದ. ಅವನ ಸುತ್ತ ಯಾವುದೋ ವ್ಯೂಹ ರಚನೆಯಾಗಿದೆಯೆಂದು ದಿಕ್ಕು ತೋಚದೆ ಪೆಕರಪೆಕರನಾಗಿ ಸುತ್ತ ನೆರೆದಿದ್ದ ಪೊಲೀಸರು, ಟಿ.ವಿ. ಚಾನೆಲ್‌ನವರನ್ನು, ಜನಗಳನ್ನು ನೋಡಿದ. ಟಿ.ವಿ.ಯವರು ಮತ್ತೆ ಅವನ ಮುಖಕ್ಕೆ ಅವುಗಳನ್ನು ಹಿಡಿದು 'ಇದು ಹೇಗೆ ಸಿಕ್ಕಿತು? ಇದರ ಜೊತೆ ಇನ್ನೂ ಏನಾದರೂ ಸಿಕ್ಕಿತಾ? ಈ ಹಿಂದೆ ನಿಮ್ಮ ಹೊಲದಲ್ಲಿ ಇಂತಹದ್ದು ಏನಾದರೂ ಸಿಕ್ಕಿತ್ತಾ? ಈ ಊರಲ್ಲಿ ಇನ್ನೂ ಬೇರೆ ಯಾರದಾದರೂ ಹೊಲದಲ್ಲಿ ಇಂಥದೇನಾದರೂ ಸಿಕ್ಕಿತ್ತಾ? ಇದು ಎಷ್ಟು ತೂಕವಿರಬಹುದು? ಸಿಕ್ಕಾಗಲೇ ಅದರ ಎಡ ಕಿವಿ ಕತ್ತರಿಸಲಾಗಿತ್ತಾ? ಒಂದೇ ಕಿವಿಯಿತ್ತಾ? ನೀವೇನಾದರೂ ಕತ್ತರಿಸಿಕೊಂಡಿರಾ?' ಎಂಬ ಪ್ರಶ್ನೆಗಳನ್ನು ಎಸೆದರು. ಏನು ತೋಚದೆ ಶಿವನಂಜಯ್ಯ 'ನಮ್ಮ ತಾಯಾಣೆಗೂ ನನಗೆ ಏನು ಗೊತ್ತಿಲ್ಲ. ಗುಡ್ಡದ ಶಿವನಾಣೆಗೂ. ಅದನ್ನು ನಾನು ನೋಡಿದ್ದು ಸ್ಟೇಷನ್‌ನಲ್ಲಿಯೇ ಮೊದಲು' ಎಂದ ಅವನ ಮಾತಿಗೆ ಅಲ್ಲಿದ್ದ ಟಿ.ವಿ.ಯವರು ಪೊಲೀಸ್‌ನವರು ಆಶ್ಚರ್ಯಗೊಂಡು 'ನಿಮ್ಮ ಹೊಲದಲ್ಲೇ ಅಲ್ವೇನ್ರಿ ಸಿಕ್ಕಿದ್ದು. ನೀವೇ ನೋಡಲಿಲ್ಲ ಮೊದಲು ಅನ್ನುತ್ತೀರಾ' ಎಂದರು. ಅದಕ್ಕೆ ಒಬ್ಬ ಪೊಲೀಸ್‌ನವರನ್ನು 'ಸಾರ್ ಸ್ಟೇಷನ್‌ಗೆ ತಂದಾಗ ಅದರ ಕಿವಿಯಿತ್ತಾ' ಎಂದು ಪ್ರಶ್ನೆ ಕೇಳಿದ. ಪೊಲೀಸ್‌ನವರು ಕ್ಷಣ ದಂಗು ಬಡಿದಂತೆ ನಿಂತರು. ಅವರಲ್ಲಿ ಒಬ್ಬ 'ಅದನ್ನು ಸರಿಯಾಗಿ ನೋಡುವುದಕ್ಕೆ ಆಗಲಿಲ್ಲ. ಆಗ ಇತ್ತೋ, ಇರಲಿಲ್ಲವೋ? ಜನ ಅಂದರೆ ಜನ ಮುತ್ತಿಕೊಂಡಿದ್ದರು' ಅಂದ. 'ಸರ್ ಕಣ್ಣುಗಳು ವಜ್ರದವಂತೆ ಹೌದೇ? ಎಷ್ಟು ಬೆಲೆ ಬಾಳಬಹುದು?' ಎಂದೆಲ್ಲಾ ಕೇಳಿದರು. 'ಮತ್ತೆ ಯಾರು ಅದನ್ನು ಮೊದಲು ನೋಡಿದ್ದು?' ಎಂದು ನಂಜಯ್ಯನನ್ನು ಕೇಳಿದರು. 'ಪದ್ದೇಶಿ ಮತ್ತು ಪನ್ನೇಶಿ ಎಂದ. 'ಅವರ‍್ಯಾರು?' ಅಂದರು. 'ಮರ ಕೊಯ್ಯುವವರು. ಅವರನ್ನು ಕರೆಯಿಸಿಯೇ ನಮ್ಮ ಹೊಲದಲ್ಲಿದ್ದ ಮರವನ್ನು ಕೊಯಿಸಿದ್ದು' ಎಂದ. ನಂತರ ಇಲ್ಲಿ ನೆರೆದಿದ್ದವರೆಲ್ಲಾ ಪದ್ದೇಶಿ ಮತ್ತು ಪನ್ನೇಶಿಯವರ ಮನೆಕಡೆ ಹೊರಟರು.

* * *

ಆ ಊರಲ್ಲಿ ಎರಡೇ ಎರಡು ಹೋಟೆಲ್‌ಗಳಿದ್ದು ಅವಕ್ಕೆ ಬಹಳ ಬೇಡಿಕೆ ಬಂತು. ಚಂದ್ರಶೇಖರ ತನ್ನ ಹೆಂಡತಿ ಒಳ್ಳೆಯ ಟೈಂಗೆ ಗುದ್ದಾಡಿಕೊಂಡು ತವರುಮನೆಗೆ ಹೋಗಿರುವುದು ಚಿಂತೆಗೀಡು ಮಾಡಿತ್ತು. ಕಾರಣ ಇನ್ನೊಂದು ಹೋಟೆಲ್ ಇದ್ದದ್ದು ಬನಶಂಕರಪ್ಪಂದು. ಬನಶಂಕರಪ್ಪನಿಗೆ ಸಿಕ್ಕಾಬಟ್ಟೆ ಲಾಭ ಬಂದುದ ಕಂಡು ಚಂದ್ರಶೇಖರನ ಒಡಲಲ್ಲಿ ಕಿಚ್ಚು ಹಚ್ಚಿದಂಗಾಯ್ತು. ತನ್ನ ಹೆಂಡತಿಗೆ ಫೋನ್ ಮಾಡಿ ಕರೆದರೆ, ಅವಳು 'ನೀನು ಅವಳನ್ನು ಇಟ್ಟುಕೊಂಡಿದ್ದೀಯಲ್ಲ. ಅವಳನ್ನೇ ಕರೆದುಕೊಂಡು